**In the NEWS**

**PRAJAVANI**

Date: Nov 21, 2015 Page: 3

Edition: Bangalore Language: Kannada

‘ಜಾಗತಿಕ ಆರ್ಥಿಕ ಬೆಳವಣಿಗೆ ಮತ್ತು ಸುಸ್ಥಿರತೆ’ ಸಮ್ಮೇಳನ

# ಆರ್ಥಿಕ ಬೆಳವಣಿಗೆಗೆ ನಿರುದ್ಯೋಗ ಸವಾಲು

ಪ್ರಜಾವಾಣಿ ವಾರ್ತೆ

ಮೈಸೂರು: ಜಾಗತಿಕ ಆರ್ಥಿಕ ಬೆಳವಣಿಗೆ ಮತ್ತು ಸುಸ್ಥಿರತೆಗೆ ನಿರುದ್ಯೋಗ ದೊಡ್ಡ ಸವಾಲಾಗಿ ಪರಿಣಮಿಸಿದೆ ಎಂದು ನೈಜಿರಿಯಾದ ಬೇಜ್ ವಿಶ್ವವಿದ್ಯಾಲಯದ ಪ್ರೊ.ಸ್ಟೀಫನ್ ಅಗ್ರೊ ಗೊರ್ಡಾನ್ ಹೇಳಿದರು.

ನಗರದ ಶ್ರೀಧರ್ಮಸ್ಥಳ ಮಂಜುನಾಥೇಶ್ವರ ನಿರ್ವಹಣೆ ಅಭಿವೃದ್ಧಿ ಸಂಸ್ಥೆಯಲ್ಲಿ (ಎಸ್‌ಡಿಎಂಐಎಂಡಿ) ಶುಕ್ರವಾರ ಏರ್ಪಡಿಸಿದ್ದ ‘ಜಾಗತಿಕ ಆರ್ಥಿಕ ಬೆಳವಣಿಗೆ ಮತ್ತು ಸುಸ್ಥಿರತೆ’ ಅಂತರರಾಷ್ಟ್ರೀಯ ಸಮ್ಮೇಳನದ ಉದ್ಘಾಟನಾ ಸಮಾರಂಭದಲ್ಲಿ ಅವರು ಮಾತನಾಡಿದರು.



ಮೈಸೂರಿನ ಶ್ರೀಧರ್ಮಸ್ಥಳ ಮಂಜುನಾಥೇಶ್ವರ ನಿರ್ವಹಣೆ ಅಭಿವೃದ್ಧಿ ಸಂಸ್ಥೆಯಲ್ಲಿ ಶುಕ್ರವಾರ ಏರ್ಪಡಿಸಿದ್ದ ‘ಜಾಗತಿಕ ಆರ್ಥಿಕ ಬೆಳವಣಿಗೆ ಮತ್ತು ಸುಸ್ಥಿರತೆ’ ಅಂತರರಾಷ್ಟ್ರೀಯ ಸಮ್ಮೇಳನದಲ್ಲಿ ಪ್ರೊ.ಸ್ಟೀಫನ್ ಅಗ್ರೊ ಗೊರ್ಡಾನ್ ಮಾತನಾಡಿದರು

ಒಟ್ಟಾರೆ ದೇಶೀಯ ಉತ್ಪನ್ನದಲ್ಲಿ (ಜಿಡಿಪಿ) ಗಣನೀಯ ಸಾಧನೆ ಆಗಿದೆ. ಆರ್ಥಿಕ ಬೆಳವಣಿಗೆ ಪ್ರಕ್ರಿಯೆಯಲ್ಲಿ ಎಲ್ಲ ಮಾನವ ಸಂಪನ್ಮೂಲವನ್ನು ತೊಡಗಿಸುವ ನಿಟ್ಟಿನಲ್ಲಿ ಗಮನಹರಿಸಬೇಕಾದ ಅಗತ್ಯ ಇದೆ. ನಿರುದ್ಯೋಗ ನಿವಾರಣೆ, ಶಿಕ್ಷಣ, ಉತ್ತಮ ಆಡಳಿತ –ಇವೇ ಮೊದಲಾದ ಅಂಶಗಳಿಗೆ ಆದ್ಯತೆ ನೀಡಬೇಕು. ಹವಾಮಾನ ವೈಪರೀತ್ಯ, ಭಯೋತ್ಪಾದನೆ ನಿವಾರಣೆಗೆ ಕ್ರಮ ವಹಿಸಬೇಕು ಎಂದು ಸಲಹೆ ನೀಡಿದರು.

ಮಾರುಕಟ್ಟೆ ಆರ್ಥಿಕತೆಯ ಹೊಸ ಆಯಾಮಗಳನ್ನು ದೃಷ್ಟಿಯಲ್ಲಿಟ್ಟು ಕೊಂಡು ಜಾಗತಿಕ ಬೆಳವಣಿಗೆ ಮತ್ತು ಸುಸ್ಥಿರತೆ ಅಂಶಗಳ ಪುನರಾವಲೋಕನ ಕೈಗೊಳ್ಳಬೇಕು ಎಂದು ವಿಶ್ಲೇಷಿಸಿದರು.

ಪ್ರತಿಯೊಬ್ಬರಿಗೂ ಗುಣಮಟ್ಟದ ಜೀವನ ನಿರ್ವಹಣೆಗೆ ಅವಕಾಶ, ಉತ್ತಮ ಉದ್ಯೋಗಾವಕಾಶಗಳು, ಗುಣಮಟ್ಟದ ಶಿಕ್ಷಣ, ಆರೋಗ್ಯ, ಸುಸಜ್ಜಿತ ವಸತಿ ಸೌಲಭ್ಯ, ಶುದ್ಧ ನೀರು, ನೈರ್ಮಲ್ಯ, ಆಹಾರ ಭದ್ರತೆ, ಪರಿಸರ ಸಂರಕ್ಷಣೆ ಇತ್ಯಾದಿ ಅಂಶಗಳು ಸುಸ್ಥಿರತೆಯನ್ನು ಪ್ರತಿನಿಧಿಸುತ್ತವೆ. ಬಡತನ ನಿರ್ಮೂಲನೆಯು ಸುಸ್ಥಿರ ಅಭಿವೃದ್ಧಿಯ ಗುರಿಯಾಗಿದೆ. ಬಡತನ ನಿರ್ಮೂಲನೆ ಹೋರಾಟದಲ್ಲಿ ಯಶಸ್ಸು ಸಾಧಿಸಬೇಕಿದೆ. ಉತ್ತಮ ಆಡಳಿತ ನೀಡಲು ನೈತಿಕ ಮೌಲ್ಯಗಳಿಗೆ ಒತ್ತು ನೀಡಬೇಕಿದೆ. ಸಮಾಜದಲ್ಲಿ ಅಮೂಲಾಗ್ರ ಸುಧಾರಣೆಗಳನ್ನು ತರಲು ರಾಜಕೀಯ ಸ್ವರೂಪವನ್ನು ಬದಲಾಯಿಸಬೇಕಿದೆ. ರಾಷ್ಟ್ರ ನಿರ್ಮಾಣದ ನಿಟ್ಟಿನಲ್ಲಿ ಸದೃಢ ಗುರಿಗಳನ್ನು ಹೊಂದುವ ಅಗತ್ಯ ಇದೆ ಎಂದು ವಿವರಿಸಿದರು.

ಸಮ್ಮೇಳನವು ಶನಿವಾರವೂ ನಡೆಯಲಿದೆ. ಎಸ್‌ಡಿಎಂಐಎಂಡಿ ನಿರ್ದೇಶಕ ಡಾ.ಎನ್.ಆರ್. ಪರಶು ರಾಮನ್, ಡಾ.ಬಿ. ವೆಂಕಟರಾಜ, ಫ್ರಾನ್ಸಿಸ್ ಕುರಿಯನ್ ಇದ್ದರು. ಬಾಂಗ್ಲಾ, ನೈಜಿರಿಯಾ ದೇಶಗಳ ಪ್ರತಿನಿಧಿಗಳು ಸಮ್ಮೇಳನದಲ್ಲಿ ಪಾಲ್ಗೊಂಡಿದ್ದಾರೆ.

**ಮುಖ್ಯಾಂಶಗಳು**

- ಜಿಡಿಪಿಯಲ್ಲಿ ಗಣನೀಯ ಸಾಧನೆ
- ಅಭಿವೃದ್ಧಿಗೆ ಸೂಕ್ಷ್ಮ ಅರ್ಥಶಾಸ್ತ್ರ ಪೂರಕ
- ಸುಸ್ಥಿರ ಅಭಿವೃದ್ಧಿಯ ಗುರಿ ಬಡತನ ನಿರ್ಮೂಲನೆ

**ನೈಜ ಅಭಿವೃದ್ಧಿಗೆ ಪೂರಕವಾಗಿ ಸೂಕ್ಷ್ಮ ಅರ್ಥಶಾಸ್ತ್ರದ ಗುಣಗಳು ಮತ್ತು ತಂತ್ರಗಾರಿಕೆಗಳನ್ನು ಬಳಸಿಕೊಳ್ಳಲು ಮುಂದಾಗಬೇಕು**

**ಪ್ರೊ.ಸ್ಟೀಫನ್ ಅಗ್ರೊ ಗೊರ್ಡಾನ್**
ನೈಜಿರಿಯಾದ ಬೇಜ್ ವಿಶ್ವವಿದ್ಯಾಲಯ

**International Conference on ‘Global Economic Growth and Sustainability’**